**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಓ ಎಸ್ ನಂ. 199/2022**

**ಡಿ.ಡಬ್ಲೂ** 2

**ದಿನಾಂಕಃ17.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಸವಿತಾ ಕಬ್ಬೆರ |
| ತಂದೆಯ ಹೆಸರು | ಲಕ್ಷ್ಮಣ |
| ಉದ್ಯೋಗ | ಪಿ ಡಿ ಓ |
| ವಯಸ್ಸು | 51 ವರ್ಷ |
| ವಾಸಸ್ಥಳ | ಸಂಗಮೇಶ್ವರ |

**ಪಾಟೀ ಸವಾಲುಃ ವಾದಿಯ ಪರ ಶ್ರೀ ವಿ ಹೆಚ್ ಕೆ ವಕೀಲರಿಂದ**

ಈ ಪ್ರಕರಣದ ಎಲ್ಲಾ ಕಾಗದ ಪತ್ರಗಳನ್ನು ನೋಡಿ ಓದಿ ತಿಳಿದುಕೊಂಡಿದ್ದೇನೆ. ಈ ಪ್ರಕರಣದ ಕೋರ್ಟನಲ್ಲಿ ಹಾಜರುಪಡಿಸಿದ ಎಲ್ಲಾ ಕಾಗದ ಪತ್ರಗಳು ಹಾಗೂ ನನ್ನ ಕಚೇರಿಯಲ್ಲಿ ಇರುವ ಎಲ್ಲಾ ಕಾಗದ ಪತ್ರಗಳನ್ನು ನೋಡಿ ಓದಿ ತಿಳಿದುಕೊಂಡಿದ್ದೇನೆ. ಡಿ.ಡಬ್ಲೂ-1 ರವರ ಪ್ರಮಾಣ ಪತ್ರ ಮತ್ತು ಪಾಟೀ ಸವಾಲುಗಳನ್ನು ನಾನು ನೋಡಿ ಓದಿ ತಿಳಿದುಕೊಂಡಿದ್ದೇನೆ. ಡಿ.ಡಬ್ಲೂ-1 ರವರ ಪಾಟೀ ಸವಾಲು ಸಾಕ್ಷಿ ಉತ್ತರಗಳನ್ನು ಅವರ ಪ್ರಮಾಣ ಪತ್ರ ಸಾಕ್ಷ್ಯದಲ್ಲಿ ಇರುವ ಎಲ್ಲಾ ಅಂಶಗಳು ಸರಿಯಾಗಿದೆ ಎಂದು ತಿಳಿದುಕೊಂಡು ಅದನ್ನೇ ನಾನು ನನ್ನ ಪ್ರಮಾಣ ಪತ್ರದಲ್ಲಿ ಅಳವಡಿಸಿಕೊಂಡು ಹಾಜರುಪಡಿಸಿದ್ದೇನೆ ಎಂದರೆ ಸರಿ.

ಈ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೇ Stock register ಮತ್ತು Account register ಗಳನ್ನು ನೋಡಿದ್ದಿರಾ ಎಂದರೆ ಸಾಕ್ಷಿಯು ಹೌದು ನುಡಿಯುತ್ತಾರೆ. ಸುಮಾರು 10 ವರ್ಷಗಳ ಹಿಂದಿನಿಂದ 1 ನೇ ಪ್ರತಿವಾದಿಗೆ ಸಂಬಂಧಪಟ್ಟ ಹಾಗೇ ಇರುತ್ತದೆ. ಸದರಿ Stock register ನಲ್ಲಿ ಪಡೆದ ಮಾಲುಗಳ ವಿವರಗಳನ್ನು ನಮೂದಾಗಿದೆ ಎಂದರೆ ಸರಿ. ಸದರಿ ವಹಿಯಲ್ಲಿ ಯಾರಿಂದ

ಮಾಲುಗಳನ್ನು ಪಡೆದು ಯಾರಿಗೆ ನಗದು ಕೊಟ್ಟು ವಿತರಿಸಲಾಗಿದೆ ಎಂದು ಎಂಬುವ ವಿಷಯವನ್ನು ನಮೂದು ಮಾಡಲಾಗಿದೆ ಎಂದರೆ ಸರಿ. 2015 ನೇ ಇಸ್ವಿಯಿಂದ ವಾದಿಯ ಅಂಗಡಿಯಿಂದ ಮಾಲುಗಳನ್ನು ಪ್ರತಿವಾದಿಯರು ಪಡೆದು ಸರಕಾರದಿಂದ grant ಬಂದ ನಂತರ ಗುತ್ತಿಗೆ ಹಣವನ್ನು ಪಾವತಿಸಿ ವ್ಯವಹಾರ ಮಾಡುತ್ತಾ ಬಂದಿದ್ದಾರೆ ಎಂದರೆ ಸರಿ. ಸಂಗಮೇಶ್ವರ ಗ್ರಾಮಸ್ಥರಿಗೆ ಗ್ರಾಮ ಪಂಚಾಯಿತಿ ವತಿಯಿಂದ ಬೋರ್‌ವೆಲ್ ನ್ನು ಅಳವಡಿಸಿ ನೀರು ಸರಬರಾಜು ಮಾಡುತ್ತಾ ಬಂದಿರುತ್ತದೆ ಎಂದರೆ ಸರಿ. 2020 ನೇ ಇಸ್ವಿಯಿಂದ ಸದರಿ ಬೋರ್‌ವೆಲ್‌ಗಳನ್ನು ಅಳವಡಿಸಿ ನೀರು ಸರಬರಾಜು ಮಾಡುತ್ತಾ ಬಂದಿರುತ್ತದೆ ಎಂದರೆ ಸರಿ.

ಸಾಕ್ಷಿಗೆ ನಿಪಿ-1 ನ್ನು ತೋರಿಸಲಾಗಿ ಅದು ನಿಮ್ಮ ಗ್ರಾಮ ಪಂಚಾಯಿತಿಯ ಲೇಟರ್ ರೆಡ್ ನಲ್ಲಿ ಅಳವಡಿಸಿದ ಇಂಡೆಂಟ್ ಎಂದರೆ ಸರಿ. ಸದರಿ ಇಂಡೆಂಟ್‌ನ ಪ್ರಕಾರ ನಿಪಿ-2 ರಂತೆ ಮಾಲುಗಳನ್ನು ವಾದಿಯಿಂದ ಪಡೆದು ಪ್ರತಿವಾದಿಯರು ನೀರು ಸರಬರಾಜು ಸಲುವಾಗಿ ಪಡೆದಿರುತ್ತಾರೆ ಎಂದರೆ ಸಾಕ್ಷಿಯು ತಪ್ಪಿದೆ ಎಂದು ನುಡಿಯುತ್ತಾರೆ. ಸಾಕ್ಷಿಯು ನಿಪಿ2 ನ್ನು ನೋಡಿ ಅದರಲ್ಲಿ ನಮೂದಾದ ಎಲ್ಲಾ ಮಾಲುಗಳನ್ನು ಗ್ರಾಮ ಪಂಚಾಯಿತಿ ಸದಸ್ಯರಾದ ವಿಜಯ ದಳವಿ ರವರು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ತುರ್ತು ಸಮಯ ವೇಳೆ ಗ್ರಾಮ ಅಧ್ಯಕ್ಷರು ಅಥವಾ ಪಿ ಡಿ ಓರವರು ಮಾಲುಗಳನ್ನು ಪಡೆದು 1 ನೇ ಪ್ರತಿವಾದಿಯ ಸಲುವಾಗಿ ಉಪಯೋಗಿಸಿಕೊಳ್ಳುತ್ತಾರೆ ಎಂದರೆ ಸರಿ.

**ಪಾಟೀಸವಾಲುಗಾಗಿ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**